ದಿನಾಂಕ: 30-01-2019

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದ:</u>

ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ.ಈ ದಾವೆಯನ್ನು ಕೆಂಚಪ್ಪನವರ ಮಕ್ಕಳು ನಿಜಗುಣ ಮತ್ತು ರಾಜಪ್ಪನವರ ವಿರುದ್ಧ ಹೂಡಿರುತ್ತಾರೆ. ಸದರಿ ದಾವೆಯನ್ನು ವಿಭಾಗಕ್ಕಾಗಿ ಹೂಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಬರೆಸಿರುವ ಕಣದ ಸ್ವತ್ತಿನ ಸಂ.55/13 ಆಗಿರುತ್ತದೆ. ವಾಸದ ಮನೆಯ ಸಂ.277 ಇರಬಹುದು. ಸದರಿ ಮನೆ 5 ಅಂಕಣದ ಕರೆ ಹಂಚಿನ ಮನೆ ಇರುತ್ತದೆ. ಸದರಿ ಸ್ವತ್ತು ಭೀಮಪ್ಪನವರ ಹೆಸರಿನಲ್ಲಿರುತ್ತದೆ. ಸದರಿ ಸ್ವತ್ತು ಭೀಮಪ್ಪನವರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ.

ಖಾತೆ ಸಂ.277 ರ ಸ್ವತ್ತಿಗೆ ಮತ್ತು ಕಣದ ಸ್ವತ್ತಿಗೆ ಈ ಪ್ರತಿವಾದಿಗಳ ವಿರುದ್ಧ ವಿಭಾಗ ಕೋರಿ ನಾವು ಮಾನ್ಯ ಸಿನಿಯರ್ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೆವು ಎಂದರೆ ನಿಜ. ಸದರಿ ದಾವೆ ನನ್ನ ತಂದೆ 2011 ನೇ ಇಸವಿಯಲ್ಲಿ ಹೂಡಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿದ್ದೆವೊ ಇಲ್ಲವೊ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು. ನನ್ನ ತಂದೆ ಮರಣ ನಂತರ ನಾನು ಸದರಿ ದಾವೆಯಲ್ಲಿ ಬೇರೆ ಪಕ್ಷಗಾರರನ್ನು ಸೇರಿಸಿರುವುದಿಲ್ಲ.

ಕಣವು ಸರ್ವೆ ನಂಬರ್ ನಲ್ಲಿ ಇದೆ ಎಂದರೆ ನಿಜ. ಸರ್ವೆ ನಂ.55/13, 2009 ನೇ ಇಸವಿಯಲ್ಲಿ ನಾಗರಾಜ ಎಂಬುವವರು ಕ್ರಯಕ್ಕೆ ಕೊಂಡುಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಮೋಸ ಮಾಡುವ ಉದ್ದೇಶದಿಂದ ಕೊಂಡುಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಸ್ವತ್ತಿನ ಖಾತೆ ಮತ್ತು ಪಹಣಿ ನಾಗರಾಜ ಎಂಬುವವರ ಹೆಸರಿನಲ್ಲಿರುತ್ತದೆ ಎಂದರೆ ನಿಜ. ನನ್ನ ತಂದೆ ಮತ್ತು ಅವರ ಸಹೋದರರು 1976 ನೇ ಇಸವಿಯಿಂದ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ನಿಜ. ಸದರಿ ಜುಬಾನಿ ವಿಬಾಗದಲ್ಲಿ ವಾದಿಗಳಾಗಲಿ ವಾದಿಗಳ ತಂದೆಯಾಗಲೀ ಪಕ್ಷಗಾರರಲ್ಲ ಎಂದರೆ ನಿಜ. 2001 ನೇ ಇಸವಿಯಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಗಳು ನೊಂದಾಯಿತ ವಿಬಾಗ ಪತ್ರವನ್ನು ಮಾಡಿಕೊಂಡರು ಎಂದರೆ ನಿಜ ಸಾಕ್ಷಿಯು ಮುಂದುವರೆದು ಜಮೀನುಗಳನ್ನು ಮಾತ್ರ ವಿಬಾಗ

ಮಾಡಿಕೊಂಡಿರುತ್ತಾರೆ ಮನೆ ಮತ್ತು ಕಣ ವಿಬಾಗ ಮಾಡಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಬಾಗ ಪತ್ರದಲ್ಲಿ ವಾದಿಗಳಾಗಲೀ, ವಾದಿಯ ತಂದೆಯಾಗಲೀ ಪಕ್ಷಗಾರರಲ್ಲ ಎಂದರೆ ನಿಜ.

ನಾನು ಈಗ ಓಎಸ್ 307/2012 ರಲ್ಲಿನ ವಂಶವೃಕ್ಷದ ದೃಡೀಕೃತ ಪ್ರತಿಯನ್ನು ನೋಡುತ್ತಿದ್ದು ಅದರಲ್ಲಿರುವ ಸಹಿ ನನ್ನದು ಎಂದರೆ ನಿಜ. ಸದರಿ ವಂಶವೃಕ್ಷದಲ್ಲಿ ವಾದಿಗಳಾಗಲೀ ಅಥವಾ ಅವರ ತಂದೆಯ ಹೆಸರಾಗಲೀ ಇಲ್ಲ ಎಂದರೆ ನಿಜ. ದಾವಾ ಸ್ವತ್ತುಗಳು ಪ್ರತಿವಾದಿ ತಂದೆ ಭೀಮಪ್ಪನವರು 1976 ನೇ ಇಸವಿಯಲ್ಲಿ ಕ್ರಯಕ್ಕೆ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ಓಎಸ್ 307/2012 ರಲ್ಲಿನ ವಂಶವೃಕ್ಷದಲ್ಲಿ ವಾದಿಗಳು ಹೆಸರನ್ನು ನಮೂದಿಸದಿದ್ದರು ಸಹ ಈಗ ಅವರನ್ನು ನಮ್ಮ ವಂಶಿಕರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ನನ್ನ ಅಥವಾ ಇತರೆ ಪ್ರತಿವಾದಿಗಳ ವಂಶಸ್ಥರಲ್ಲ ಎಂದರೆ ಸರಿಯಲ್ಲ. ಭೀಮಪ್ಪ ಬಿನ್ ತುಪ್ಪಪ್ಪನವರ ಮನೆಯನ್ನು ಕಬಳಿಸುವ ಉದ್ದೇಶದಿಂದ ವಾದಿಗಳು ನನ್ನಮೂಲಕ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ